8

# ಬಿ.ಎಸ್.ಎನ್.ಎಲ್. ನೌಕರರ ಹೌಸಿಂಗ್ ಸಹಕಾರ ಸಂಘ (ನಿ)

(ನೋಂದಣಿ ಸಂಖ್ಯೆ : ಎ.ಆರ್.ಎಮ್ /1881/70-71)

**ಹೊಸ ನಂ.ಎಫ್-3/9,2ನೇ ಕ್ರಾಸ್, ಶಂಕರಮಠದ ರಸ್ತೆ, ಫೋರ್ಟ್ ಮೊಹಲ್ಲಾ**

**ಮೈಸೂರು - 570004**

*******************************************

## ಆಡಳಿತ ವರದಿ

ಸಂಘದ 2024-25ನೇ ಸಾಲಿನ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಸ್ವಾಗತಿಸುತ್ತಾ, ಸಂಘದ ಆಡಳಿತ ವರದಿಯನ್ನು ಮಹಾಸಭೆಯ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಲು ಆದೇಶಿತನಾಗಿದ್ದೇನೆ.

2024-25 ನೇ ಸಹಕಾರ ವರ್ಷದಲ್ಲಿ ಕೆಳಕಂಡವರುಗಳು ಸಂಘದ ಆಡಳಿತ ಮಂಡಳಿ ಸದಸ್ಯರಾಗಿ / ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿರುತ್ತಾರೆ.

- ಶ್ರೀ ಎನ್.ಡಿ. ಸುಂದರ್ – ಅಧ್ಯಕ್ಷರು,
- ಶ್ರೀ ನಾಗೇಶ್ .ವಿ – ಉಪಾಧ್ಯಕ್ಷರು,
- ಶ್ರೀಮತಿ ವಿ. ಶಶಿಕಲ – ನಿರ್ದೇಶಕರು
- ಶ್ರೀಮತಿ ಜಯಲಕ್ಷ್ಮಿ. ಪಿ. ರಾವ್, – ನಿರ್ದೇಶಕರು
- ಶ್ರೀ ವಿ. ಗೋಪಿನಾಥ್ – ನಿರ್ದೇಶಕರು
- ಶ್ರೀ ಮಲ್ಲಪ್ಪ. ಜಿ – ನಿರ್ದೇಶಕರು
- ಶ್ರೀ ಜಿ. ಶೇಖರಮೂರ್ತಿ – ನಿರ್ದೇಶಕರು
- ಶ್ರೀ ಮುರಳಿ – ನಿರ್ದೇಶಕರು
- ಶ್ರೀ ಎ. ಸುರೇಶ್ – ನಿರ್ದೇಶಕರು
- ಶ್ರೀ ಎ. ಪ್ರಕಾಶ್ – ನಿರ್ದೇಶಕರು
- ಶ್ರೀ ಕೆ.ಪಿ. ರಾಮಕೃಷ್ಣ, – ನಿರ್ದೇಶಕರು
- ಶ್ರೀ ಪಾಪಣ್ಣ – ನಿರ್ದೇಶಕರು
- ಶ್ರೀ ಲಕ್ಷ್ಮಿನಾರಾಯಣ – ನಿರ್ದೇಶಕರು

* ವರದಿ ಸಾಲಿನಲ್ಲಿ 12 ಆಡಳಿತ ಮಂಡಳಿ ಸಭೆಗಳು ನಡೆದಿರುತ್ತದೆ. 2024-2025 ನೇ ಸಾಲಿನ ವಾರ್ಷಿಕ ಮಹಾಸಭೆಯು **08/09/2024** ರಂದು ಜರುಗಿರುತ್ತದೆ.

* ದಿನಾಂಕ:-31/03/2025ರ ಅಂತ್ಯಕ್ಕೆ ಸಂಘವು 1672 ಸದಸ್ಯರುಗಳನ್ನು ಹೊಂದಿರುತ್ತದೆ. ಅಲ್ಲದೆ 405 ಜನರು ಒಂದು ಷೇರಿನ ಪೂರ್ಣ ಮೊಬಲಗನ್ನು ಪಾವತಿಸದ ಹಿನ್ನೆಲೆಯಲ್ಲಿ ಸದರಿ ಸದಸ್ಯರುಗಳ ಅಪೂರ್ಣ ಷೇರು ಅಮಾನತ್ತಿನಲ್ಲಿ ಮುಂದುವರೆದಿರುತ್ತದೆ.

- **ಮುಕ್ತಾಯಗೊಂಡಿರುವ 1ನೇ ಹಂತ:-** ಯಾವುದೇ ಚಟುವಟಿಕೆ ಇರುವುದಿಲ್ಲ.
- **ಮುಕ್ತಾಯಗೊಂಡಿರುವ 2ನೇ ಹಂತ:-** ಯಾವುದೇ ಚಟುವಟಿಕೆ ಇರುವುದಿಲ್ಲ.
- **ಮುಕ್ತಾಯಗೊಂಡಿರುವ 3ನೇ ಹಂತ:-** ಅಭಿವೃದ್ಧಿ ಚಟುವಟಿಕೆ ಇರುವುದಿಲ್ಲ.
- **ಯೋಜಿತ 4ನೇ ಹಂತ:**

ಸಂಘವು ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸರ್ವೆ ನಂಬರ್ 191, 193/5, 184, 186, 188, 190, 195, 3/2, 191/2 ,191/8 ರಲ್ಲಿ ಒಟ್ಟು 28 ಎಕರೆ 30.5 ಗುಂಟೆ ಹಾಗೂ ಸರ್ವೆ ನಂ 3/2,191/2,191/8 ರ 3 ಎಕರೆ 39 ಗುಂಟೆ ಜಮೀನುಗಳಲ್ಲಿ ಅಭಿವೃದ್ದಿಪಡಿಸಿರುವ ವಸತಿ ಬಡಾವಣೆ ನಿವೇಶನಗಳನ್ನು ಸದಸ್ಯರುಗಳಿಗೆ ಮಂಜೂರಾದ ನಕ್ಷೆಯಂತೆ ವಿವಿಧ ಅಳತೆಯ ಒಟ್ಟು 430 ನಿವೇಶನಗಳನ್ನು ಅಭಿವೃದ್ಧಿ ಪಡಿಸಿ, ಇವುಗಳನ್ನು ಸದಸ್ಯರಿಗೆ ಜೇಷ್ಠತೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ.

ಬಡಾವಣೆಯಲ್ಲಿ ಲಭ್ಯವಿರುವ ಒಟ್ಟು 430 ನಿವೇಶನಗಳ ಪೈಕಿ 430 ನಿವೇಶನಗಳು ಪ್ರಾಧಿಕಾರದಿಂದ ಶೇಕಡ 100% ರಷ್ಟು ಬಿಡುಗಡೆಗೊಂಡಿದ್ದು, ನಿವೇಶನಗಳ ನೋಂದಣಿ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿರುತ್ತದೆ.

- **ಯೋಜಿತ 5ನೇ ಹಂತ:**

ಉದ್ದೇಶಿಸಲಾಗಿರುವ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ವಾಜಮಂಗಲ ಗ್ರಾಮದಲ್ಲಿ ಸರ್ವೆ ನಂ: 34/1ಎ, 34/1ಬಿ, 34/2, 34/3, 34/4, 34/4ಎ, 34/5ಬಿ, 34/8ಎ, 34/9, 192/2, 192/3, 193/3, 193/4, 193/5, 193/6, 194/1ಬಿ, 194/1ಎ2, 213/3, 194/1ಎ1, 200/1, 200/2, 200/3, 200/6, 206/1ಎ1, 206/3, 213/1, 214/3, 216, 217/1, 217/2, 217/3ರಲ್ಲಿ ಸುಮಾರು 49 ಎಕರೆ 39 ಗುಂಟೆ ಜಮೀನಿನ ಪೈಕಿ 39ಎಕರೆ 35.5ಗುಂಟೆ ಜಮೀನಿನನ್ನು ನಕ್ಷೆ ಅನುಮೋದನೆಗೊಂಡಿದ್ದು , ನಕ್ಷೆ ಬಿಡುಗಡೆ ಆದೇಶ ಸಂಖ್ಯೆ:-ಮೈ. ನ. ಪ್ರಾ: ನ ಯೋ ಶಾ: ವಿನ್ಯಾಸ: 55: 2021-22, ದಿನಾಂಕ:7-8-2021 ರಂದು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರವರಿಂದ ವಸತಿ ವಿನ್ಯಾಸ ನಕ್ಷೆಯ ಅನುಮತಿ ಆದೇಶ ಬಿಡುಗಡೆಯಾಗಿರುತ್ತದೆ.

- 39ಎಕರೆ 35.5ಗುಂಟೆ ಜಮೀನುಗಳಲ್ಲಿ ಅಭಿವೃದ್ದಿಪಡಿಸಿರುವ ವಸತಿ ಬಡಾವಣೆ ನಿವೇಶನಗಳನ್ನು ಸದಸ್ಯರುಗಳಿಗೆ ಮಂಜೂರಾದ ನಕ್ಷೆಯಂತೆ ವಿವಿಧ ಅಳತೆಯ ಮೂಲೆ ನಿವೇಶನಗಳನ್ನು ಹರಾಜಿನ ಮೂಲಕ ಸದಸ್ಯರಿಗೆ ಹಂಚಿಕೆ ಮಾಡಲಾಗಿದೆ.

ಸಂಘವು "**ನನ್ನ ನಿವೇಶನ ನನ್ನ ಆಯ್ಕೆ**" ಎಂಬ ಅಭಿಯಾನದೊಂದಿಗೆ ಸದಸ್ಯರ ಜೇಷ್ಠತೆಗೆ ಅನುಗುಣವಾಗಿ ಸದಸ್ಯರಿಗೆ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಲು ಅನುವು ಮಾಡಿಕೊಡಲಾಯಿತು. ಬಡಾವಣೆಯಲ್ಲಿ

ಸಿವಿಲ್ ಕಾಮಗಾರಿಗಳು ,ಒಳಚರಂಡಿ ,ನೀರು,ಉದ್ಯಾನವನ, ಸಿ.ಎ.ನಿವೇಶನ, ರಸ್ತೆ, ವಿದ್ಯುತ್ ಈ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ ಹಾಗು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು,ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದ ಅದೇಶ ಸಂಖ್ಯೆ: ಮೈನಪ್ರಾ:ನಯೋಶಾ:ವಿನ್ಯಾಸ: 20 :2025-26 ದಿನಾಂಕ 25/4/2025 ರಂದು ಒಟ್ಟು 39 ಎಕರೆ 39.05 ಗುಂಟೆ ವಿಸ್ತೀರ್ಣದ

ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರವು ಅಂತಿಮ ಅನುಮೋದನೆ ನೀಡಿದ್ದು, ಸಂಘದ ಹೆಸರಿಗೆ ಖಾತೆ ವರ್ಗಾವಣೆಯಾದ ನಂತರ ಸದಸ್ಯರಿಗೆ ನೋಂದಣಿ ಮಾಡಿಕೊಡಲು ಕ್ರಮವಿಡಲಾಗುವುದು.

- ವಾಜಮಂಗಲ ಗ್ರಾಮದ ಸರ್ವೆ ನಂಬರ್ 139/1, 141/3,142/3, 183/4,183/5,183/6,183/7,183/9 & 194/3 ರಲ್ಲಿ ಒಟ್ಟು 6 ಎಕರೆ 04 ಗುಂಟೆ ಜಮೀನುಗಳು ಭೂಪರಿವರ್ತನೆಗೊಂಡಿದ್ದು,ಹಾಗು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿರುತ್ತದೆ. ಬಡಾವಣೆಯಲ್ಲಿ ಸಿವಿಲ್ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿದೆ.

- ವಾಜಮಂಗಲ ಗ್ರಾಮದ ಸರ್ವೆ ನಂಬರ್:134/2,215/2,ರಲ್ಲಿ ಒಟ್ಟು ಗುಂಟೆ ಒಟ್ಟು ೩ ಎಕರೆ ೦೯. ಗುಂಟೆ ಜಮೀನುಗಳು ಭೂಪರಿವರ್ತನೆಗೊಂಡಿದ್ದು ,ಹಾಗು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ಅದೇಶ ಸಂಖ್ಯೆ: ಮೈನಪ್ರಾ:ನಯೋಶಾ:ವಿನ್ಯಾಸ: 29 :2025-26 ದಿನಾಂಕ 25/4/2025 ರಂದು ಒಟ್ಟು ೩ ಎಕರೆ ೦೯. ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನಿಮೋದನೆ ನೀಡಾಲಾಗಿದೆ. ಹಾಗು ಬಡಾವಣೆಯಲ್ಲಿ ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿದೆ. ಶೀಘ್ರದಲ್ಲೇ ಬಾಕಿ ಉಳಿದ ನಿವೇಶನಾಕಾಂಕ್ಷಿಗಳಿಗೆ ಸದಸ್ಯರ ಜೇಷ್ಠತೆಗೆ ಅನುಗುಣವಾಗಿ **"ನನ್ನ ನಿವೇಶನ ನನ್ನ ಆಯ್ಕೆ"** ಎಂಬ ಅಭಿಯಾನದೊಂದಿಗೆ, ಸದಸ್ಯರಿಗೆ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಲು ಅನುವು ಮಾಡಿಕೊಡಲಾವುದು.

ವರದಿ ಸಾಲಿನಲ್ಲಿ ಮೇ॥ ಸ್ಕಿಲ್‌ಟೆಕ್ ಗುತ್ತಿಗೆದಾರರಿಗೆ ಬಡಾವಣೆ ಅಭಿವೃದ್ದಿ ಸಂಬಂಧ ರೂ.3,61,80,180/-ಗಳನ್ನು ವ್ಯಯ ಮಾಡಲಾಗಿದೆ.

ಹಾಗು ವಾಜಮಂಗಲ ಗ್ರಾಮದ ಒಟ್ಟು 6 ಎಕರೆ 04 ಗುಂಟೆ ಜಮೀನಿನ ಕೆ.ಟಿ.ಸಿ.ಪಿ.ಕಾಯ್ದೆ 1961 ಕಲಂ 17(A) ಮತ್ತು KUDA ಕಾಯ್ದೆ 1987 ಕಲಂ ೩೨ರ ಸಂಬಂಧ ರೂ.16,23,300/-ಪಾವತಿಸಲಾಗಿದೆ.

ಮತ್ತು ವಾಜಮಂಗಲ ಗ್ರಾಮದ ಒಟ್ಟು ೩ ಎಕರೆ ೦೯. ಗುಂಟೆ ಜಮೀನಿನ ಕೆ.ಟಿ.ಸಿ.ಪಿ.ಕಾಯ್ದೆ 1961 ಕಲಂ 17(A) ಮತ್ತು KUDA ಕಾಯ್ದೆ 1987 ಕಲಂ ೩೨ರ ಸಂಬಂಧ ರೂ.9,84,900/- ಪಾವತಿಸಲಾಗಿದೆ.

➢ **<u>ಯೋಜಿತ 6ನೇ ಹಂತ:</u>**

6ನೇ ಹಂತ,ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆಲ್ಲಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ:-33/3 ಮತ್ತು 33/4 ರ ಒಟ್ಟು 3 ಎಕರೆ 2 ಗುಂಟೆ ಜಮೀನಿನಲ್ಲಿ ವಸತಿ ಬಡಾವಣೆ ನಿವೇಶನಗಳನ್ನು ಸದಸ್ಯರುಗಳಿಗೆ ಮಂಜೂರಾದ ನಕ್ಷೆಯಂತೆ ವಿವಿಧ ಅಳತೆಯ ಒಟ್ಟು 51 ನಿವೇಶನಗಳನ್ನು ಅಭಿವೃದ್ಧಿಪಡಿಸಿ ಇವುಗಳನ್ನು ಸದಸ್ಯರಿಗೆ ಜೇಷ್ಠತೆ ಆಧಾರದ ಮೇಲೆ ಹಂಚಿಕೆಮಾಡಿ ನೊಂದಣಿಮಾಡಿಕೊಡಲಾಗಿದೆ.

ಸಂಬಂಧಪಟ್ಟ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದುಶೇಕಡ 100% ರಷ್ಟು ನಿವೇಶನಗಳು ಬಿಡುಗಡೆಗೊಂಡಿದ್ದು, ನಿವೇಶನಗಳ ನೋಂದಣಿ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿರುತ್ತದೆ.

➢ **<u>ಯೋಜಿತ 7ನೇ ಹಂತ:</u>**

7ನೇ ಹಂತದ ಹೊಸ ಬಡಾವಣೆ ನಿರ್ಮಿಸುವ ಬಗ್ಗೆ ಮಹಾಸಭೆಯ ಅನುಮೋದನೆ ಪಡೆದಿದ್ದು, ಮೈಸೂರು ತಾಲ್ಲೂಕು,ಜಯಪುರ(ಹೋ),ಉದ್ಬೂರು(ಗ್ರಾ) ಸರ್ವೆ ನಂ.113/2,3,154/2,156,157,158,210, ಮತ್ತು ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು ವಿಸ್ತೀರ್ಣ 25 ಎಕರೆ ಜಮೀನಿಗೆ ಬೇಟಿ ನೀಡಿ, ಈ ಜಮೀನನ್ನು ಸಂಘವು ಹುಡುಕುತ್ತಿದ್ದ ವ್ಯಾಪ್ತಿಯಲ್ಲೆ ಲಭ್ಯವಿದ್ದು ಜೊತೆಗೆ ಉದ್ಬೂರು ಮಾನಂದವಾಡಿ ಮುಖ್ಯ ರಸ್ತೆಯಿಂದ ಕೇವಲ 1

11

ಕಿ.ಮೀ ಒಳಗೆ ಇರುತ್ತದೆ ಮತ್ತು ಬಡಾವಣೆಯನ್ನು ವಸತಿ ನಿರ್ಮಾಣಮಾಡಲು ಯೋಗ್ಯವಾಗಿರುವ ಕಾರಣ, ಈ ಜಮೀನುಗಳಿಗೆ ಸಂಬಂಧಪಟ್ಟಂತೆ ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ಗುತ್ತಿಗೆದಾರರಾದ **"ಆರ್.ವಿ.ವೈ.ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್" #ಎಂ.ಐ.ಜಿ.-43,ವಿವೇಕಾನಂದ ಸರ್ಕಲ್,ಮುಖ್ಯ ರಸ್ತೆಯ, ಕರ್ನಾಟಕ ಬ್ಯಾಂಕ್ ಎದುರು, ಮೈಸೂರು-23** ರವರನ್ನು ನೇಮಿಸಿಕೊಂಡು , ಕರಾರುಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು, ದಿನಾಂಕ:07/02/2024 ರಂದು ಸಂಘದ ಜೊತೆಯಲ್ಲಿ ಕರಾರುಮಾಡಿಕೊಳ್ಳಲಾಯಿತ್ತು. ಪ್ರಸ್ತುತ ನೂತನ ಬಡಾವಣೆಗೆ ನೂತನ ಸದಸ್ಯರು ಅರ್ಜಿಸಲ್ಲಿಸುತ್ತಿದ್ದ.ಈ ಜಮೀನುಗಳಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರರು

ದಾಖಲಾತಿಗಳನ್ನು ಸಂಘಕ್ಕೆ ಸಲ್ಲಿಸಿದ್ದು. ಸಲ್ಲಿಸಿದ ಜಮೀನಿನ ದಾಖಲಾತಿಗಳನ್ನು ಕಾನೂನುಬದ್ಧ ಅಭಿಪ್ರಾಯ(legal opinion) ತಿಳಿಯಲು ಸಂಘವು ವಕೀಲರಿಗೆ ನೀಡಲಾಗಿದೆ.

ವರದಿ ಸಾಲಿನಲ್ಲಿ ಮೇ॥ **"ಆರ್.ವಿ.ವೈ.ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್"** ಗುತ್ತಿಗೆದಾರರಿಗೆ ಬಡಾವಣೆ ಅಭಿವೃದ್ಧಿ ಸಂಬಂಧ ರೂ:-50,00,000/-ಗಳನ್ನು ಪಾವತಿಸಲಾಗಿದೆ.

*********************************************************************

- ಸಂಘದ 2024-25ನೇ ಸಾಲಿನ ಲೆಕ್ಕಪತ್ರಗಳು ಪರಿಶೋಧನೆಗೊಂಡು ವರದಿ ಬಿಡುಗಡೆಯಾಗಿದ್ದು, ಸದರಿ ಸಾಲಿನ ಲೆಕ್ಕಪತ್ರಗಳು ಹಾಗೂ ವರದಿಯನ್ನು ಮಹಾಸಭೆಯ ಅನುಮೋದನೆ ಕೋರಲಾಗಿದೆ.

- ಸಂಘವು 2024-25 ನೇ ಸಾಲಿನಲ್ಲಿ ರೂ: 1,17,647.76 ನಿವ್ವಳ ಲಾಭಗಳಿಸಿದ್ದು, ಸದರಿ ಲಾಭವನ್ನು ಇಲಾಖಾ ನಿಯಮಾನುಸಾರ ಕೆಳಕಂಡಂತೆ ವಿಲೇವಾರಿ ಮಾಡಲು ಮಹಾಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| ಅಪದ್ಧನ ನಿಧಿ, ಶೇಕಡ 25 | ರೂ.29,411.94 |
| ಸಹಕಾರ ವಿದ್ಯಾನಿಧಿ, ಶೇಕಡ 2 | ರೂ.1,764.82 |
| ಸದಸ್ಯರ ಷೇರಿನ ಮೇಲೆ ಲಾಭಾಂಶ ಶೇಕಡ | ರೂ.- |
| ನೌಕರರಿಗೆ ಬೋನಸ್ | ರೂ.24,000.00 |
| ನಿವೇಶನ ನಿರ್ವಹಣಾ ವೆಚ್ಚದ ನಿಧಿ | ರೂ. 62,471 |

- ಸಂಘದ 2025-26 ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಮಹಾಸಭೆಯ ಅನುಮೋದನೆ ಕೋರಲಾಗಿದೆ.
- **ಸಂಘದ 2025-2030 ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರ ವಿವರ**

ಬಿ.ಎಸ್.ಎನ್.ಎಲ್.ನೌಸಿಂಗ್ ಸಹಕಾರ ಸಂಘ(ನಿ) ಮೈಸೂರು ಇದರ ಆಡಳಿತ ಮಂಡಳಿಯ 2025-2030 ರ ಅವಧಿಗೆ ದಿನಾಂಕ:16/02/2025 ರಂದು ನಿಗಧಿಯಾಗಿದ್ದ, ಚುನಾವಣೆಗೆ ಈ ಕೆಳಕಂಡ ಅಭರ್ಥಿಗಳು ಸಂಘದ ಆಡಳಿತ ಮಂಡಳಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳು 1960 ರ ನಿಯಮ 14 ಜಿ ರನ್ವಯ ಒಳಗೊಂಡಿರುತ್ತದೆಂದು ರಿಟರ್ನಿಂಗ್ ಅಧಿಕಾರಿಯಾದ ಶ್ರೀಮತಿ.ಜಿ.ಪ್ರೇಮ ರವರು ಘೋಷಿಸಿರುತ್ತಾರೆ.

- ಶ್ರೀ ಎನ್.ಡಿ. ಸುಂದರ್ – ನಿರ್ದೇಶಕರು
- ಶ್ರೀ ನಾಗೇಶ್ .ವಿ – ನಿರ್ದೇಶಕರು
- ಶ್ರೀ ಜಿ. ಶೇಖರಮೂರ್ತಿ – ನಿರ್ದೇಶಕರು
- ಶ್ರೀ ಮಲ್ಲಪ್ಪ. ಜಿ – ನಿರ್ದೇಶಕರು
- ಶ್ರೀ ಮುರಳಿ – ನಿರ್ದೇಶಕರು
- ಶ್ರೀ ಎ. ಸುರೇಶ್ – ನಿರ್ದೇಶಕರು
- ಶ್ರೀ.ಎ. ಪ್ರಕಾಶ್ – ನಿರ್ದೇಶಕರು
- ಶ್ರೀಮತಿ ಜಯಲಕ್ಷ್ಮಿ. ಪಿ. ರಾವ್, – ನಿರ್ದೇಶಕರು
- ಶ್ರೀಮತಿ ಮಹಾಲಕ್ಷಮ್ಮ – ನಿರ್ದೇಶಕರು
- ಶ್ರೀ ಕೆ.ಪಿ. ರಾಮಕೃಷ್ಣ, – ನಿರ್ದೇಶಕರು
- ಶ್ರೀ ಪಾಪಣ್ಣ – ನಿರ್ದೇಶಕರು
- ಶ್ರೀ ಲಕ್ಷ್ಮಿನಾರಾಯಣ – ನಿರ್ದೇಶಕರು
- ಶ್ರೀ.ಬಿ.ಎನ್.ಗಂಗಾಧರ – ನಿರ್ದೇಶಕರು

ಬಿ.ಎಸ್.ಎನ್.ಎಲ್.ಹೌಸಿಂಗ್ ಸಹಕಾರ ಸಂಘ(ನಿ) ಮೈಸೂರು ಇದರ ಆಡಳಿತ ಮಂಡಳಿಯ ಅಧ್ಯಕ್ಷರ / ಉಪಾಧ್ಯಕ್ಷರ 2025–2030 ರ ಅವಧಿಯ ಆಡಳಿತ ಮಂಡಳಿ ಚುನಾವಣೆಯನ್ನು ದಿನಾಂಕ:17/02/2025 ರಂದು ನಿಗಧಿಯಾಗಿದ್ದ, ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಎನ್.ಡಿ. ಸುಂದರ್ ಮತ್ತು ಉಪಾಧ್ಯಕ್ಷರಾಗಿ ಶ್ರೀ..**ವಿ.ನಾಗೇಶ್** ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ರಿಟರ್ನಿಂಗ್ ಅಧಿಕಾರಿಯಾದ ಶ್ರೀಮತಿ.ಜಿ.ಪ್ರೇಮ ರವರು ಘೋಷಿಸಿರುತ್ತಾರೆ.

ಸಂಘದ ಸರ್ವತೋಮುಖ ಅಭಿವೃದ್ಧಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡುತ್ತಿರುವ ಎಲ್ಲರಿಗೂ ಹಾಗೂ ವಿವಿಧ ಇಲಾಖಾಧಿಕಾರಿಗಳಿಗೆ ಆಡಳಿತ ಮಂಡಳಿಯ ಪರವಾಗಿ ವಂದನೆಗಳನ್ನು ಅರ್ಪಿಸುತ್ತಾ, ಸಂಘದ ಆಡಳಿತ ವರದಿಯನ್ನು ಮುಕ್ತಾಯಗೊಳಿಸುತ್ತೇನೆ.

ದಿನಾಂಕ:–04/09/2025
ಸ್ಥಳ: ಮೈಸೂರು

ಆಡಳಿತಮಂಡಳಿ ಅನುಮತಿ ಮೇರೆಗೆ
ಸಹಿ
ಅಂಜಲಿ.ಎ.ಡಿ.
**ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ**